ನನ್ನ ಹಿಂದಿ ಗೆಳೆಯ ಬಂದು ಅಂಗಿ ಜಗ್ಗಿದ – 'ಚಲೋ... ಅಪ್ಪಮ್ ಆಗಲೇ ಖಾಲಿಯಾಗಿ ಹೊಟ್ಟೆ ತಾಳ ಹಾಕುತ್ತಿದೆ.' ಸರಿ, ಮತ್ತೆ ಬಯಲಿಗೆ ಬಂದು ತಿನಿಸುಗಳ ಅಂಗಡಿಯ ಬಳಿ ಹೋದೆವು. ಅಷ್ಟರಲ್ಲಾಗಲೇ ನಾವು ಮೊದಲು ನೋಡಿದ್ದಕ್ಕಿಂತ ದುಪ್ಪಟ್ಟು ಜನ ಜಮಾಯಿಸಿದ್ದರು; ಪಕ್ಕದ ಊರುಗಳಿಂದ ಗಾಡಿಗಳು ಬರುತ್ತಿದ್ದವು; ನಾಲ್ಕಾರು ಬಸ್ಸುಗಳೂ ಇನ್ನೂ ಅನೇಕ ವಾಹನಗಳೂ ಬಂದು ನಿಂತು ಗದ್ದಲ ಜಾಸ್ತಿಯಾಗಿತ್ತು. ನನಗೆ ಯಕ್ಷಗಾನದ ಜನಜಂಗುಳಿ ನೆನಪಿಗೆ ಬಂತು – 'ಮೊದಲಿನ ಸಾದಾ ವೇಷಗಳೆಲ್ಲ ಮುಗಿಯಲಿ, ದೊಡ್ಡ ವೇಷದ ಪ್ರವೇಶಕ್ಕೆ ಸರಿಯಾಗಿ ಹೋಗೋಣ' ಎಂದು ಅವರೆಲ್ಲ ಯೋಚಿಸಿ, ಈಗ ಬಂದಿದ್ದಾರೆ ಎಂದುಕೊಂಡೆ. ನನಗೆ ತಿಂಡಿ ತಿನ್ನುವ ಹಸಿವೆ ಇಲ್ಲದ್ದರಿಂದ, ಅವರನ್ನು ಅಲ್ಲೇ ಬಿಟ್ಟು ನಾನು ಮೂತ್ರಶಂಕೆಗೆ ಜಾಗ ಹುಡುಕಿಕೊಂಡು ಹೋದೆ. ಬಯಲಿನ ತುದಿಯಲ್ಲಿ ನಿಂತು ನೋಡಿದರೆ, ಅಕಾ... ದೂರದ ಗದ್ದೆ ಬಯಲಿನಲ್ಲಿ ಇನ್ನೊಂದು ದೊಡ್ಡ ಗುಂಪು ಗ್ಯಾಸ್ ಲೈಟುಗಳ ಬೆಳಕಲ್ಲಿ ಸೇರಿಕೊಂಡಿತ್ತು. ಗಿರಗಿರಮಂಡಲದಂಥ ಜುಗಾರಿ ಅಡ್ಡೆ ಇರಬಹುದಲ್ಲವಾ? ಅನ್ನಿಸಿತು; ಆದರೆ, ಅತ್ತ ಹೋಗುವ ಸಾಹಸ ಮಾಡಲಿಲ್ಲ.

ಹೊರಟ ಜಾಗಕ್ಕೆ ಮರಳುವಾಗ, ನನ್ನ ಸ್ನೇಹಿತರೆಲ್ಲ ಕಾಣೆಯಾಗಿದ್ದರು – ವಾದ್ಯಗಳ ಸದ್ದು ಕೇಳಿದರೆ ಅತ್ತ, ಆಟಕ್ಕೆ ರಂಗೇರಿದಂತೆ ತೋರುತ್ತಿತ್ತು. ಈ ಬಾರಿ ಬಯಲಿನ ಮೂರು ಬೇರೆಬೇರೆ ಕಡೆಗಳಲ್ಲಿ ಜನ ಹಂಚಿ ನಿಂತಿದ್ದರಿಂದ, ಬೇರೆಬೇರೆ ದೆಯ್ಯಗಳು ಪ್ರವೇಶ ಮಾಡಿರಬೇಕು ಅಂದುಕೊಂಡೆ; ಹೆಚ್ಚು ಜನಸೇರಿದ ಒಂದು ಕಡೆಗೆ ಹೋಗಿ ಸೇರಿಕೊಳ್ಳೋಣವೆಂದು ಹೊರಟೆ – ಆಗಲೇ ಅನಿರೀಕ್ಷಿತವಾದ ಆ ಘಟನೆ ನಡೆದುಹೋಯಿತು. ಗುಂಪಿನ ನಡುವೆ ಓಡಾಡುತ್ತಿದ್ದ ಗೋಪಾಲನ್ ಅವರ ಭಾಷೆಯ "ಪುಡಿ–ದೆಯ್ಯ"ವೊಂದು ಹಠಾತ್ತಾಗಿ ಬಂದು ನನ್ನೆದುರಿಗೆ ನಿಂತುಬಿಟ್ಟಿತು. ಒಂದು ಕ್ಷಣ ಏನು ಮಾಡಬೇಕೆಂದು ತಿಳಿಯದೆ ನಾನು ಅಪ್ರತಿಭನಾದೆ. ನಿಜ, ಕೆಲವೇ ಗಂಟೆ ಮೊದಲು – ಹೀಗಾಗಬಹುದು, ಹೆದರಬೇಡಿ – ಎಂದು ಗೋಪಾಲನ್ ಹೇಳಿದ್ದು ನೆನಪಾಯಿತು. ಆದರೆ ಆಗಬಹುದು ಎಂಬುದನ್ನು ತಿಳಿಯಲಿಕ್ಕೂ ಅದೇ ಆಗುವುದಕ್ಕೂ ವ್ಯತ್ಯಾಸ ಇದ್ದೇ ಇದೆಯಲ್ಲ? ಜತೆಗೆ, ಆವಾಹಿತ ವ್ಯಕ್ತಿಯೊಂದು ಅಷ್ಟು ಸನಿಹಕ್ಕೆ ಬಂದು ನನ್ನನ್ನೇ ದಿಟ್ಟಿಸುತ್ತಿರುವುದು ನನಗೆ ಮೊದಲ ಬಾರಿಯ ಅನುಭವ. ಆ ಕ್ಷಣ ಮೈ ಕಂಪಿಸಿತು.

ನಾನು ಆ ದೆಯ್ಯದ ರೂಪುರೇಷೆಗಳನ್ನು ದಿಟ್ಟಿಸಿ ನೋಡಿದೆ – ವೇಷಭೂಷಣವೇನೂ ವಿಶೇಷವಾಗಿರಲಿಲ್ಲ; ಯಕ್ಷಗಾನ ತೆಂಕುತಿಟ್ಟಿನ ಸಣ್ಣ ವೇಷಗಳಂತೆ ನಿರಿಗೆನಿರಿಗೆಯ ಹಲವು ಪದರುಗಳ ಒಂದು ಲಂಗ ಮತ್ತು ಒಂದು ಸಣ್ಣ ಕಿರೀಟ ಮಾತ್ರ ಇತ್ತು; ಎದೆಯ ಭಾಗದಲ್ಲಿ ಆಭರಣ ಬಿಟ್ಟರೆ ಏನೂ ಬಟ್ಟೆ ಧರಿಸಿರಲಿಲ್ಲ. ಮುಖಕ್ಕೆ ಕೆಂಪು–ಹಳದಿ–ಕಪ್ಪು–